**ಸಾಕ್ಷಿಯನ್ನು ದಿಃ 06.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ. ಎನ್ ಎನ್ ವಕೀಲರಿಂದ**

ನಾನು ಖರೀದಿ ಮಾಡಿದ ಆಸ್ತಿಯ ಮೂಲ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಮಾರಾಟಗಾರರ ಪಿತ್ರಾರ್ಜಿತ ಆಸ್ತಿಯಾದ ಕಾರಣ ಖಾತೆ, ಮ್ಯುಟೇಶನ್ ಪಹಣಿಗಳನ್ನು ನೋಡಿ ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಖರೀದಿ ಮಾಡುವಾಗ ದಾವಾ ಐಟಂ 5 ಮತ್ತು 7 ನ್ನು ನಾನು ಖರೀದಿ ಮಾಡುವಾಗ ಸದರಿ ಆಸ್ತಿಯು ಅಕ್ಕಚ್ಚಮ್ಮರವರ ಮಕ್ಕಳ ಪಿತ್ರಾರ್ಜಿತ ಆಸ್ತಿ ಎಂದು ನನಗೆ ತಿಳಿಯಿತು. ಖರೀದಿ ಮಾಡುವಾಗ ಮಾರಾಟಗಾರರ ವಂಶವೃಕ್ಷವನ್ನು ಪಡೆದುಕೊಂಡಿಲ್ಲ. ಮಾರಾಟಗಾರರ ಸಂಪೂರ್ಣ ಸದಸ್ಯರ ಬಗ್ಗೆ ನನಗೆ ಮಾಹಿತಿ ಇತ್ತು. ಮಾರಾಟಗಾರರ ಕುಟುಂಬದ ಎಲ್ಲಾ ಸದಸ್ಯರು ಕ್ರಯಪತ್ರಕ್ಕೆ ಸಹಿ ಮಾಡಿರುತ್ತಾರೆ. ನಾನು ಎಲ್ಲಾ ಸದಸ್ಯರು ಸಹಿ ಮಾಡಿದ್ದಾರೆ ಎಂದು ಖುದ್ದು ಮಾಹಿತಿ ಮೇರೆಗೆ ಹೇಳುತ್ತಿದ್ದೇನೆ ಹೊರತು ದಾಖಲೆ ಆಧಾರದ ಮೇಲೆ ಅಲ್ಲ. ಮಾರಾಟಗಾರರರಿಂದ ಅವರ ಕುಟುಂಬದ ವಂಶವೃಕ್ಷವನ್ನು ಪಡೆದುಕೊಂಡು ಎಲ್ಲರ ಸಹಿಗಳನ್ನು ಪಡೆದುಕೊಳ್ಳಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಕೆ ಮುನಿಯಪ್ಪ ಮತುತ ಅಕ್ಕಚ್ಚಮ್ಮರವರ ಎಲ್ಲಾ ಕುಟುಂಬದ ಸದಸ್ಯರ ಸಹಿ ಪಡೆದುಕೊಂಡು ಖರೀದಿ ಮಾಡಿರುವುದಾಗಿ ನುಡಿಯುತ್ತಾರೆ. ಕೆ ಮುನಿಯಪ್ಪನವರ ಕುಟುಂಬದ ಮೂಲ ಪುರುಷ ಯಾರು ಎಂದು ನನಗೆ ಗೊತ್ತಿಲ್ಲ. ಮುನಿವೆಂಕಟಪ್ಪನವರ ಮಗ ದಂಡಪ್ಪನಿಗೆ 7 ಜನ ಮಕ್ಕಳು ಎಂದರೆ ನನಗೆ ಮುನಿವೆಂಕಟಪ್ಪ ಮತ್ತು ದಂಡಪ್ಪ ಯಾರು ಎಂದೇ ತಿಳಿದಿಲ್ಲ. ನನ್ನ ಮಾರಾಟಗಾರರ ಕುಟುಂಬದ ಮೂಲ ಪುರುಷ ಕೆ.ಮುನಿಯಪ್ಪ ಎಂದು ನುಡಿಯುತ್ತಾರೆ. ಅಂದರೆ ದಂಡಪ್ಪನ ಮಗನ ಹೆಸರು ಮುನಿಯಪ್ಪ ಎಂದಗೆ ನನಗೆ ಗೊತ್ತಿಲ್ಲ. ಸದರಿ ಮುನಿಯಪ್ಪನಿಗೆ ನಾಲ್ಕು ಜನ ಮಕ್ಕಳು, ಅವರುಗಳು ಚಂದ್ರಪ್ಪ, ಲಲಿತ, ಪುಷ್ಪ, ಅಕ್ಕಚ್ಚಮ್ಮ ನನಗೆ ಗೊತ್ತಿಲ್ಲ. ದಂಡಪ್ಪನಿಗೆ 2 ನೇ ಮಗ ವೆಂಕಟೇಶ್ ಈ ದಾವೆಯ 1 ನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ.

ದಂಡಪ್ಪನಿಗೆ 3 ನೇ ಮಗಳು ಮೆಣಸಮ್ಮ ಈ ದಾವೆಯ 2 ನೇ ವಾದಿ ಎಂದರೆ ನನಗೆ ಗೊತ್ತಿಲ್ಲ. ದಂಡಪ್ಪನಿಗೆ 4 ನೇ ಮಗಳು ನಾರಾಯಣಮ್ಮ ಈ ದಾವೆಯ 3 ನೇ ವಾದಿ ಎಂದರೆ ನನಗೆ ಗೊತ್ತಿಲ್ಲ. ದಂಡಪ್ಪನಿಗೆ 5 ನೇ ಮಗಳು ಪದ್ಮಮ್ಮ ಈಗ ಮೃತರಾಗಿದ್ದು, ಅವರ ಮಕ್ಕಳು ಈ ದಾವೆಯ 5 ರಿಂದ 7 ನೇ ವಾದಿಗಳು ಎಂದರೆ ನನಗೆ ಗೊತ್ತಿಲ್ಲ. ದಂಡಪ್ಪನಿಗೆ 6 ನೇ ಮಗಳು ಲಕ್ಷ್ಮಮ್ಮ ಈ ದಾವೆಯ 4 ನೇ ವಾದಿ ಎಂದರೆ ನನಗೆ ಗೊತ್ತಿಲ್ಲ. ದಂಡಪ್ಪನಿಗೆ 7 ನೇ ಮಗ ಶ್ರೀನಿವಾಸ್ ಈ ದಾವೆಯ 2 ನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ವಾದಿ ಮಂಗಮ್ಮ ದಂಡಪ್ಪನ ಹೆಂಡತಿ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ವಾದಿ ಪರಿಚಯ ಇರುತ್ತಾರೆ, ದಂಡಪ್ಪ ಗೊತ್ತಿಲ್ಲ. ಈ ಮೇಲೆ ಹೇಳಿದ ಎಲ್ಲಾ ಸದಸ್ಯರು ಒಟ್ಟು ಕುಟುಂಬದ ಸದಸ್ಯರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 19.04.1968 ರಂದು ದಂಡಪ್ಪನಿಗೆ ಪಿತ್ರಾರ್ಜಿತ ಆಸ್ತಿಗಳನ್ನು ವಿಭಾಗ ಮಾಡಿಕೊಂಡಾಗ ಆತನ ಪಾಲಿಗೆ ಬಂದಂತಹ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಮಾರಾಟಗಾರರ ವಂಶವೃಕ್ಷ ವನ್ನು ಪಡೆದುಕೊಂಡಿದ್ದರೆ ಮೇಲೆ ಹೇಳಿದ ಎಲ್ಲಾ ಒಟ್ಟು ಕುಟುಂಬದ ಸದಸ್ಯರ ಬಗ್ಗೆ ಗೊತ್ತಾಗುತ್ತಿತ್ತು ಎಂದರೆ ಸರಿ. ದಾವೆ ಹೂಡಿದ ಬಳಿಕ ಮಾರಾಟಗಾರರ ಕಡೆಯಿಂದ ದಂಡಪ್ಪನ ಕುಟುಂಬದ ವಾರಸುದಾರರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಮಾಡಲಿಲ್ಲ. ಮಾರಾಟ ಮಾಡಿರುವವರಿಂದ ಮೇಲೆ ಹೇಳಿದ ಸದಸ್ಯರಿಗೂ ಮತ್ತು ನನ್ನ ಮಾರಾಟಗಾರರಿಗೂ ಅಣ್ಣತಮ್ಮಂದಿರು ಎಂದು ತಿಳಿದುಬಂದಿದೆ. ತಿಳಿದ ಮೇಲೆ ಒಟ್ಟು ಕುಟುಂಬದ ಉಳಿದ ಸದಸ್ಯರಿಂದ ಕ್ರಯಪತ್ರವನ್ನು ಮಾಡಿಕೊಳ್ಳಲು ಪ್ರಯತ್ನ ಮಾಡಲಿಲ್ಲ. ಒಟ್ಟು ಕುಟುಂಬದ ಸದಸ್ಯರ ಹಕ್ಕನ್ನು ಮರೆಮಾಚಿ ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನನ್ನ ಮಾರಾಟಗಾರರಿಂದ ಕ್ರಯಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ್ದರೂ ಕೂಡ ಇಂದಿಗೂ ಒಟ್ಟು ಕುಟುಂಬದ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನು ಸ್ವಾಧೀನದಲ್ಲಿದ್ದೇನೆ ಎಂದು ನುಡಿಯುತ್ತಾರೆ.

ವಾಸ್ತವಾಂಶ ಗೊತ್ತಿದ್ದರೂ ಕೂಡ ಸುಳ್ಳು ಪ್ರಮಾಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಚಂದ್ರಶೇಖರ್ ಅಲಬೂರು)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ

**ಸಾಕ್ಷಿಯನ್ನು ದಿಃ 06.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ. ಎನ್ ಎನ್ ವಕೀಲರಿಂದ**

ನಾನು ದಾವಾ ಐಟಂ 6 ರ ಖರೀದಿದಾರ. ನಾನು ಖರೀದಿ ಮಾಡಿದ ಆಸ್ತಿಯ ಮೂಲ ದಾಖಲೆಗಳನ್ನು ಪಡೆದುಕೊಂಡಿಲ್ಲ. ನನಗೆ 16 ನೇ ಪ್ರತಿವಾದಿ ದಾವಾ ಐಟಂ 6 ನ್ನು ಮಾರಾಟ ಮಾಡಿದ. 16 ನೇ ಪ್ರತಿವಾದಿ ಯಾರಿಂದ ಖರೀದಿ ಮಾಡಿದ ನನಗೆ ಗೊತ್ತಿಲ್ಲ. 16 ನೇ ಪ್ರತಿವಾದಿಗೆ 1 ನೇ ಪ್ರತಿವಾದಿ ಮತುತ ಅಣ್ಣತಮ್ಮಂದಿರು ಮಾರಾಟ ಮಾಡಿರುವುದು ಎಂದರೆ ಸರಿ, ಸಾಕ್ಷಿ ಮುಂದುವರೆದು ಖರೀದಿ ಮಾಡಿದ ನಂತರ ಗೊತ್ತಾಯಿತು.

ಖರೀದಿ ಮಾಡುವಾಗ ಮಾರಾಟಗಾರರ ವಂಶವೃಕ್ಷವನ್ನು ಪಡೆದುಕೊಂಡಿಲ್ಲ. ದಾವಾ ಐಟಂ 6 ಮೂಲತಃ ದಂಡಪ್ಪನಿಗೆ ಸೇರಿದ್ದು ಎಂದರೆ ಸರಿಯಲ್ಲ. ಕೆ ಮುನಿಯಪ್ಪನವರ ಕುಟುಂಬದ ಮೂಲ ಪುರುಷ ಯಾರು ಎಂದು ನನಗೆ ಗೊತ್ತಿಲ್ಲ. ಮುನಿವೆಂಕಟಪ್ಪನವರ ಮಗ ದಂಡಪ್ಪನಿಗೆ 7 ಜನ ಮಕ್ಕಳು ಎಂದರೆ ನನಗೆ ಮುನಿವೆಂಕಟಪ್ಪ ಮತ್ತು ದಂಡಪ್ಪ ಯಾರು ಎಂದೇ ತಿಳಿದಿಲ್ಲ. ನನ್ನ ಮಾರಾಟಗಾರರ ಕುಟುಂಬದ ಮೂಲ ಪುರುಷ ಕೆ.ಮುನಿಯಪ್ಪ ಎಂದು ನುಡಿಯುತ್ತಾರೆ. ಅಂದರೆ ದಂಡಪ್ಪನ ಮಗನ ಹೆಸರು ಮುನಿಯಪ್ಪ ಎಂದಗೆ ನನಗೆ ಗೊತ್ತಿಲ್ಲ. ಸದರಿ ಮುನಿಯಪ್ಪನಿಗೆ ನಾಲ್ಕು ಜನ ಮಕ್ಕಳು, ಅವರುಗಳು ಚಂದ್ರಪ್ಪ, ಲಲಿತ, ಪುಷ್ಪ, ಅಕ್ಕಚ್ಚಮ್ಮ ನನಗೆ ಗೊತ್ತಿಲ್ಲ. ದಂಡಪ್ಪನಿಗೆ 2 ನೇ ಮಗ ವೆಂಕಟೇಶ್ ಈ ದಾವೆಯ 1 ನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. ದಂಡಪ್ಪನಿಗೆ 3 ನೇ ಮಗಳು ಮೆಣಸಮ್ಮ ಈ ದಾವೆಯ 2 ನೇ ವಾದಿ ಎಂದರೆ ನನಗೆ ಗೊತ್ತಿಲ್ಲ. ದಂಡಪ್ಪನಿಗೆ 4 ನೇ ಮಗಳು ನಾರಾಯಣಮ್ಮ ಈ ದಾವೆಯ 3 ನೇ ವಾದಿ ಎಂದರೆ ನನಗೆ ಗೊತ್ತಿಲ್ಲ. ದಂಡಪ್ಪನಿಗೆ 5 ನೇ ಮಗಳು ಪದ್ಮಮ್ಮ ಈಗ ಮೃತರಾಗಿದ್ದು, ಅವರ ಮಕ್ಕಳು ಈ ದಾವೆಯ 5 ರಿಂದ 7 ನೇ ವಾದಿಗಳು ಎಂದರೆ ನನಗೆ ಗೊತ್ತಿಲ್ಲ.

ದಂಡಪ್ಪನಿಗೆ 6 ನೇ ಮಗಳು ಲಕ್ಷ್ಮಮ್ಮ ಈ ದಾವೆಯ 4 ನೇ ವಾದಿ ಎಂದರೆ ನನಗೆ ಗೊತ್ತಿಲ್ಲ. ದಂಡಪ್ಪನಿಗೆ 7 ನೇ ಮಗ ಶ್ರೀನಿವಾಸ್ ಈ ದಾವೆಯ 2 ನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ವಾದಿ ಮಂಗಮ್ಮ ದಂಡಪ್ಪನ ಹೆಂಡತಿ ಎಂದರೆ ನನಗೆ ಗೊತ್ತಿಲ್ಲ. ಈ ಮೇಲೆ ಹೇಳಿದ ಎಲ್ಲಾ ಸದಸ್ಯರು ಒಟ್ಟು ಕುಟುಂಬದ ಸದಸ್ಯರು ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ 6 ದಂಡಪ್ಪನ ಪಿತ್ರಾರ್ಜಿತ ಆಸ್ತಿ ಎಂದರೆ ಗೊತ್ತಿಲ್ಲ. ದಿನಾಂಕಃ 19.04.1968 ರಂದು ದಂಡಪ್ಪನಿಗೆ ಪಿತ್ರಾರ್ಜಿತ ಆಸ್ತಿಗಳನ್ನು ವಿಭಾಗ ಮಾಡಿಕೊಂಡಾಗ ಆತನ ಪಾಲಿಗೆ ಬಂದಂತಹ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ದಂಡಪ್ಪ ಮೃತರಾದ ಬಳಿಕ ಮೇಲೆ ಹೇಳಿದ ಎಲ್ಲಾ ಒಟ್ಟು ಕುಟುಂಬದ ಸದಸ್ಯರು ಸದರಿ ಆಸ್ತಿಯ ವಾರಸುದಾರರು ಎಂದರೆ ಗೊತ್ತಿಲ್ಲ. ಒಟ್ಟು ಕುಟುಂಬದ ಸದಸ್ಯರ ಹಕ್ಕನ್ನು ಮರೆಮಾಚಿ ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ 16 ನೇ ಪ್ರತಿವಾದಿಯಿಂದ ಕ್ರಯಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು 16 ನೇ ಪ್ರತಿವಾದಿ ಸೇರಿ ಕ್ರಯಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಖಾಲಿ ಜಮೀನು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ದಾವಾ ಐಟಂ 6 ರಲ್ಲಿ ತೆಂಗಿನ ಗಿಡ ಹಾಕಿದ್ದೇನೆ. ಯಾವ ಗಿಡವನ್ನು ಹಾಕಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ್ದರೂ ಕೂಡ ಇಂದಿಗೂ ಒಟ್ಟು ಕುಟುಂಬದ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನು ಸ್ವಾಧೀನದಲ್ಲಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಹೂಡಿದ ಬಳಿಕ 16 ನೇ ಪ್ರತಿವಾದಿಗೂ ಮತ್ತು ವಾದಿಯ ಕುಟುಂಬಕ್ಕೂ ಏನು ಸಂಬಂಧ ಎಂದು ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ ಆದರೆ ಯಾರಿಂದ ಪಡೆದುಕೊಂಡರು ಎಂದು ತಿಳಿದುಕೊಂಡಿದ್ದೇನೆ.

ವಾದಿಯ ದಾಖಲೆಗಳನ್ನು ಪರಿಶೀಲಿಸಿದ್ದರೂ ಕೂಡ ವಾದಿಗಳಿಗೆ ಮೋಸ ಮಾಡಲು ಸುಳ್ಳು ಪ್ರಮಾಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಚಂದ್ರಶೇಖರ್ ಅಲಬೂರು)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ